**ದಿನಾಂಕ 28-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋಧಿಸಲಾಯಿತು.**

**<u>ಪಾಟೀ ಸವಾಲು</u> :- 14 ರಿಂದ 16 ನೇ, 19 ಮತ್ತು 20 ನೇ ಪ್ರತಿ**ವಾದಿ ಪರ ಶ್ರೀ. ಎಸ್.ಎಸ್.ಪಿ ವಕೀಲರಿಂದ.

ಈ ದಾವೆಯನ್ನು ಒಟ್ಟು 72 ಎಕರೆ ಕುರಿತಾಗಿ ಸಲ್ಲಿಸಿರುತ್ತೇನೆ. ದಾವಾ ಜಮೀನುಗಳು ಪಿತ್ರಾರ್ಜಿತ ಸ್ವತ್ತುಗಳಾಗಿರುತ್ತವೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಸಲ್ಲಿಸಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿ ಸಲ್ಲಿಸಿರುತ್ತೇನೆ ಯಾವ ದಾಖಲೆಗಳು ಎಂದು ಹೇಳಲು ಬರುವುದಿಲ್ಲ. ಸರ್ವೆ ನಂ.41, 42, 46, 21, 163 ಮತ್ತು 150 ಈ ಜಮೀನುಗಳು ನಮ್ಮ ತಾತನ ಜಮೀನುಗಳು ಆಗಿರುತ್ತವೆ ಇತರೆ ಜಮೀನುಗಳ ಸರ್ವೆ ನಂಬರ್ ನೆನಪಿರುವುದಿಲ್ಲ.

ಲಿಂಗದಳ್ಳಿ ಗ್ರಾಮದ ಸರ್ವೆ ನಂ.21 ಮತ್ತು ಜಾಲಹಳ್ಳಿ ಸರ್ವೆ ನಂ.163 ರ 02 ಜಮೀನುಗಳನ್ನು 2 ನೇ ಪ್ರತಿವಾದಿ ವಿಠೋಬಾ ನಾಯಕ್ ಖರೀದಿಸಿರುತ್ತಾರೆ ಅಂದರೆ ಸಾಕ್ಷಿಯು ನನ್ನ ತಾತ ಖರೀದಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಖರೀದಿ ಪತ್ರಗಳು ವಿಠೋಬಾ ನಾಯಕ ಇವರ ಹೆಸರಿನಲ್ಲಿ ಇರುತ್ತವೆ ಅಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.163 ರ 22 ಎಕರೆ ಇರುತ್ತದೆ. ಸದರಿ ಸರ್ವೆ ನಂ.163 ಈಗ ಯಾರ ಯಾರ ಹೆಸರಿನಲ್ಲಿ ಎಷ್ಟು ಕ್ಷೇತ್ರ ಇರುತ್ತದೆ ಎಂದು ಹೇಳಲು ನೆನಪಿರುವುದಿಲ್ಲ. ಲಿಂಗದಳ್ಳಿ ಗ್ರಾಮದ ಸರ್ವೆ ನಂ.21 ರಲ್ಲಿ ಎಷ್ಟು ಎಕರೆ ಇರುತ್ತದೆ ನನಗೆ ಹೇಳಲು ಬರುವುದಿಲ್ಲ. ಸದರಿ ಸರ್ವೆ ನಂ.21 ಯಾರ ಹೆಸರಿನಲ್ಲಿ ಇರುತ್ತದೆ ನನಗೆ ಗೊತ್ತಿಲ್ಲ. ಸದರಿ ಸರ್ವೆ ನಂ.21 ರಲ್ಲಿ ಸೂರ್ಯನಾರಾಯಣ, ಬಸ್ಸಮ್ಮ, ತ್ರೀಮೂರ್ತಿ ಇವರುಗಳು ಜಮೀನನ್ನು ಖರೀದಿಸಿದ್ದು ಇನ್ನೋರ್ವರು ಸದರಿ ಸರ್ವೆ ನಂಬರಿನಲ್ಲಿ ಜಮೀನನ್ನು ಖರೀದಿಸಿದ್ದು ಅವರ ಹೆಸರು ಈಗ ನೆನಪಿನಲ್ಲಿ ಇರುವುದಿಲ್ಲ. ಸದರಿ ಖರೀದಿದಾರರು ಎಷ್ಟು ಕ್ಷೇತ್ರ ಖರೀದಿ ಮಾಡಿರುತ್ತಾರೆ ನನಗೆ ಹೇಳಲು ಬರುವುದಿಲ್ಲ. ಸದರಿ ಖರೀದಿದಾರರು ಯಾರಿಂದ ಜಮೀನನ್ನು ಖರೀದಿಸಿರುತ್ತಾರೆ ನನಗೆ ಗೊತ್ತಿರುವುದಿಲ್ಲ. ಈಗ ಕಳೆದ 15 ವರ್ಷಗಳಿಂದ ಇತ್ತೀಚೆಗೆ ಜಾಲಹಳ್ಳಿಗೆ ಯಾವಾಗಲಾದರು ಒಮ್ಮೆ ಕರೆದಾಗ ಬಂದು ಹೋಗಿರುತ್ತೇನೆ. ನಾನು ಜಾಲಹಳ್ಳಿಗೆ ಬಂದು ಹೋಗುತ್ತಿದ್ದಾಗ ಜಮೀನುಗಳನ್ನು ಮಾರಾಟ ಮಾಡಿರುವ ವಿಚಾರ ತಿಳಿದುಬಂದಿರುವುದಿಲ್ಲ. ನ್ಯಾಯಾಲಯಕ್ಕೆ ದಾವೆ ಸಲ್ಲಿಸಿದ ನಂತರ ಕುಟುಂಬದ ಜಮೀನುಗಳನ್ನು ಮಾರಾಟ ಮಾಡಿದ ಬಗ್ಗೆ ತಿಳಿದು ಬಂದಿರುತ್ತದೆ.

ಒಟ್ಟು ಎಷ್ಟು ಎಕರೆ ಜಮೀನನ್ನು ಮಾರಾಟ ಮಾಡಿರುತ್ತಾರೆ ನನಗೆ ಗೊತ್ತಿರುವುದಿಲ್ಲ. ತ್ರೀಮೂರ್ತಿ ಯಾವುದೇ ಜಮೀನನ್ನು ಖರೀದಿ ಮಾಡಿರುವುದಿಲ್ಲ ಅಂದರೆ ಸರಿಯಲ್ಲ. ತ್ರೀಮೂರ್ತಿ ಮತ್ತು ತಿಪ್ಪೇಸ್ವಾಮಿ ಇವರುಗಳ ತಂದೆ ಖರೀದಿಸಿದ ಜಮೀನನ್ನು ನೋಂದಾಯಿತ ವಿಭಾಗ ಪತ್ರ ಮೂಲಕ ಭಾಗ ಮಾಡಿಕೊಂಡಿರುತ್ತಾರೆ ಅಂದರೆ ನನಗೆ ಗೊತ್ತಿಲ್ಲ. ತಿಪ್ಪೇಸ್ವಾಮಿ ಎಂಬುವವರನ್ನು ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಅಂದರೆ ಸರಿ. ದಿ.27-05-2019 ರಂದು ನೋಂದಾಯಿತ ವಿಭಾಗ ಪತ್ರ ಆಗಿರುತ್ತದೆ ಅಂದರೆ ನನಗೆ ಗೊತ್ತಿಲ್ಲ. ಸದರಿ ವಿಭಾಗ ಪತ್ರ ವಿಷಯ ನನಗೆ ಗೊತ್ತಿದ್ದರು ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ಜಾಲಹಳ್ಳಿಯ ಸರ್ವೆ ನಂ.163 ರಲ್ಲಿ ಕೃಷ್ಣಪ್ಪ, ವೆಂಕಟಪ್ಪ ಮತ್ತು ವಿಜಯಲಕ್ಷ್ಮೀ ಜಮೀನುಗಳನ್ನು ಖರೀದಿಸಿರುತ್ತಾರೆ. ಸದರಿಯವರುಗಳು ಎಷ್ಟು ಕ್ಷೇತ್ರ ಖರೀದಿಸಿರುತ್ತಾರೆ ನನಗೆ ಗೊತ್ತಿಲ್ಲ. ಸದರಿ ಕೃಷ್ಣಪ್ಪ ಮತ್ತು ವೆಂಕಟಪ್ಪ ಖರೀದಿಸಿದ ಜಮೀನು ಈಗ ಸಾಗುವಳಿ ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ನಾನು ದಾವೆ ಸಲ್ಲಿಸು ಪೂರ್ವದಲ್ಲಿ ಕೃಷ್ಣಪ್ಪ ಮತ್ತು ವೆಂಕಟಪ್ಪ ಖರೀದಿಸಿದ ಒಟ್ಟು 02 ಎಕರೆ ಜಮೀನು ಎನ್.ಎ ಆಗಿ ಪರಿವರ್ತನೆ ಆಗಿರುತ್ತದೆ ಅಂದರೆ ನನಗೆ ಗೊತ್ತಿಲ್ಲ. ಸದರ ಎನ್.ಎ ಪ್ಲಾಟಗಳನ್ನು ಮಾರಾಟ ಮಾಡಿದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸದರಿ ಎನ್.ಎ ಪ್ಲಾಟಗಳನ್ನು ಮಾರಾಟ ಮಾಡಿದ ಬಗ್ಗೆ ನನಗೆ ಗೊತ್ತಿದ್ದರು ಸದರಿ ಪ್ಲಾಟಗಳನ್ನು ಖರೀದಿಸಿದವರನ್ನು ಪಕ್ಷಗಾರರನ್ನಾಗಿ ಮಾಡಬೇಕಾಗುತ್ತದೆ ಎಂದು ಮಾರಾಟ ಮಾಡಿರುವುದಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

14 ನೇ ಪ್ರತಿವಾದಿ ರುದ್ರಯ್ಯ ಯಾವ ಸರ್ವೆ ನಂಬರನಲ್ಲಿ ಜಮೀನನ್ನು ಖರೀದಿಸಿರುತ್ತಾರೆ ನನಗೆ ಜಮೀನು ಸರ್ವೆ ನಂಬರ್ ಹೇಳಲು ಬರುವುದಿಲ್ಲ ಆದರೆ ಎರಿ ಭೂಮಿಯನ್ನು ಖರೀದಿಸಿರುತ್ತಾರೆ ಎಂದು ನುಡಿಯುತ್ತಾರೆ. ರುದ್ರಯ್ಯ ಎಷ್ಟು ಜಮೀನನ್ನು ಖರೀದಿಸಿರುತ್ತಾರೆ ನನಗೆ ಗೊತ್ತಿಲ್ಲ. ರುದ್ರಯ್ಯ ಖರೀದಿಸಿದ ಜಮೀನು ವಿಠೋಬ ನಾಯಕ ಇವರ ಸ್ವಯಾರ್ಜಿತ ಸ್ವತ್ತು ಆಗಿರುತ್ತದೆ ಅಂದರೆ ಸರಿಯಲ್ಲ.

ಸರ್ವೆ ನಂ. 42, 21 ಮತ್ತು 163 ಈ ಜಮೀನುಗಳು ವಿಠೋಬ ನಾಯಕ ಇವರ ಸ್ವಯಾರ್ಜಿತ ಸ್ವತ್ತುಗಳಾಗಿರುತ್ತವೆ ಅಂದರೆ ಸರಿಯಲ್ಲ. ಖರೀದಿದಾರರಿಗೆ ತೊಂದರೆ ಕೊಡಲು

ಸುಳ್ಳು ದಾವೆ ಸಲ್ಲಿಸಿ ಸುಳ್ಳು ಪ್ರಮಾಣ ಪತ್ರದ ಮೂಲಕ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

2 ನೇ ಪ್ರತಿವಾದಿ ಪರ ವಕೀಲರು ಮಾಡಿರುವ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ನುಡಿಯುತ್ತಾರೆ.

**ಮರುವಿಚಾರಣೆ:- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.